**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀ ಡಿ ಜೆ ಆರ್ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ವಾದಿ ಮತ್ತು ಪ್ರತಿವಾದಿಗಳ ನಡುವೆ ಆದ ಕರಾರು ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ನನಗೆ ಈಗ ತೋರಿಸಿದ ಪತ್ರ ಸದರಿ ಪತ್ರವಾಗಿರುತ್ತದೆ. ಸದರಿ ಪತ್ರಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ. ಸದರಿ ಪತ್ರವನ್ನು ಈಗಾಗಲೇ ನಿಡಿ 1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಡಿ-1 ಡಿ ಎಂದು ಗುರುತಿಸಲಾಯಿತು. ನನ್ನೊಂದಿಗೆ ಸದರಿ ಪತ್ರಕ್ಕೆ ಚಂದ್ರಪ್ಪ ರವರು ಕೂಡ ಸಹಿ ಮಾಡಿರುತ್ತಾರೆ. ಸಾಕ್ಷಿ ಚಂದ್ರಪ್ಪ ರವರ ಸಹಿಯನ್ನು ಗುರುತಿಸಿದ್ದು ಅದನ್ನು ನಿಡಿ -1 ಇ ಎಂದು ಗುರುತಿಸಲಾಯಿತು. ಸದರಿ ಪತ್ರವನ್ನು ಬಸವರಾಜಪ್ಪ ರವರು ತಯಾರು ಮಾಡಿರುತ್ತಾರೆ. ಅವರು ಕೂಡ ತಮ್ಮ ಸಹಿಯನ್ನು ಮಾಡಿರುತ್ತಾರೆ. ಸಾಕ್ಷಿ ಗುರುತಿಸಿದ ಬಸವರಾಜಪ್ಪ ರವರ ಸಹಿಯನ್ನು ನಿಡಿ -1 ಎಫ್ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಡಿ ಸಿ ವಕೀಲರಿಂದಃ**

1. ನಾನು ವಾದಿ ಗಂಡ ಜಯಣ್ಣ ರವರನ್ನು ಎಂದೂ ನೋಡಿರಲಿಲ್ಲ. ಕರಾರು 14 ಎಕರೆ ಜಮೀನಿಗೆ ಸಂಬಂದಪಟ್ಟಂತೆ ಆಗಿರುತ್ತದೆ ಸದರಿ ಜಮೀನು ಒಟ್ಟು ಮೂರು ಬಾಗದಲ್ಲಿ ಇತ್ತು ಸದರಿ ಜಮೀನು ವೇದಾವತಿ ನದಿಯ ಪಕ್ಕದಲ್ಲಿ ಬರುತ್ತದೆ ಎಂದರೆ ಸಾಕ್ಷಿ ಚನಲ್ ಪಕ್ಕದಲ್ಲಿ ಬರುತ್ತದೆ ಎಂದು ನುಡಿದಿರುತ್ತಾರೆ. ಇತ್ತಿಚೆಗೆ ಸದರಿ ಜಮೀನು 1 ಎಕರೆಗೆ 15 ರಿಂದ 20 ಲಕ್ಷದ ವರೆಗೆ ಮಾರಾಟವಾಗುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಕರಾರಿನಲ್ಲಿ ಪ್ರತಿ ಎಕರೆಗೆ ಎಷ್ಟು ಹಣ ಎಂದು ನಮೂದು ಮಾಡಿರುವುದಿಲ್ಲ. ಒಟ್ಟು ಮೊತ್ತವನ್ನು ನಮೂದು ಮಾಡಾಲಾಗಿದೆ. ಜಲಧೀರಪ್ಪ ರವರ ಪರಿಚಯ ನನಗೆ ಸುಮಾರು ವರುಷಗಳ ಹಿಂದೆ ಇದೆ. ನಾನು ಅವರೊಂದಿಗೆ ವಿಶ್ವಾಸದಿಂದ ಇದ್ದೇನೆ. ವ್ಯಾಜ್ಯದ ಎಲ್ಲಾ ಜಮೀನುಗಳನ್ನು ನಾನು ನೋಡಿರುವುದಿಲ್ಲ.

ಒಂದು ಜಮೀನನ್ನು ನೋಡಿದ್ದೇನೆ. ಪತ್ರ ಬರವಣಿಗೆ ಆಗುವ ಒಂದು ವಾರ ಮೊದಲು ನನಗೆ ಜಲಧೀರಪ್ಪ ರವರು ಸಾಕ್ಷಿಯಾಗಿ ಬರಲು ಕೇಳಿಕೊಂಡಿದ್ದರು. ಅವರು ನನಗೆ ನಿಖರವಾದ ದಿನಾಂಕವನ್ನು ಹೇಳಿದ್ದರು. ಸದರಿ ದಿವಸ ಅವರು ನನಗೆ ಕರೆಯಲು ಬಂದಿರಲಿಲ್ಲ. ಪತ್ರ ಬರಹಗಾರರಾದ ಬಸವರಾಜಪ್ಪ ರವರು ರಸ್ತೆಯಲ್ಲಿ ಒಂದು ಟೇಬಲ್ ಅನ್ನು ಹಾಕಿಕೊಂಡಿದ್ದರು. ಪತ್ರವನ್ನು ಯಾರು ಟೈಪ್ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಹೋದಾಗ ಪತ್ರ ತಯಾರಿತ್ತು. ನಾನು ಹೋದಾಗ ಎಲ್ಲಾ ರುಜುಗಳು ಆಗಿದ್ದವು ಎಂದರೆ ಸಾಕ್ಷಿ ರುಜುಗಳು ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ಒಂದನೇ ವಾದಿಯ ಮಕ್ಕಳು ಅಲ್ಲಿಗೆ ಬಂದಿದ್ದರೋ ಇಲ್ಲವೋ ಎಂದು ನನಗೆ ಹೇಳಲಾಗುವುದಿಲ್ಲ. ಕಾರಣ ನಾನು ಅವರಿಗೆ ನೋಡಿರುವುದಿಲ್ಲ. ಒಂದನೇ ವಾದಿಯ ಪುರುಷ ಸಂಬಂದಿಕರು ಬಂದಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡಿದ ನಂತರ ಚಂದ್ರಪ್ಪ ರವರು ತಮ್ಮ ಸಹಿಯನ್ನು ಮಾಡಿದರು. ಸದರಿ ದಿವಸ ಜಲಧೀರಪ್ಪ ರವರ ತಾಯಿ ಮುದ್ದಮ್ಮ ರವರು ಜಮೀನನ್ನು ಮಾರಾಟ ಮಾಡಿದ್ದು ಸದರಿ ಪತ್ರಕ್ಕೆ ನೀವು ಸಹಿ ಮಾಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆ ಸಮಯದಲ್ಲಿ ನಾನು ಇರಲಿಲ್ಲವೆಂದು ನುಡಿದಿರುತ್ತಾರೆ. ಸದರಿ ದಿವಸದಂದು ನಾನು 3.00 ರಿಂದ 3.30 ಸಮಯದಲ್ಲಿ ಅಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಮುದ್ದಮ್ಮ ರವರು ಮಾಡಿದ ಪತ್ರ ಯಾವ ಸಮಯದಲ್ಲಿ ಆಯಿತು ಎಂದು ನನಗೆ ಗೊತ್ತಿಲ್ಲ. ಪತ್ರದಲ್ಲಿ ಜಮೀನಿನ ಸ್ವಾದೀನ ಅದೇ ದಿವಸ ಬಿಟ್ಟು ಕೊಡಲಾಗಿದೆ ಎಂದು ನಮೂದಿಸಲಾಗಿದೆ. ಅದಕ್ಕೂ ಮುಂಚೆ ನಾನು ಜಮೀನಿನ ಸ್ವಾದೀನ ಯಾರೊಂದಿಗೆ ಇದೆ ಎಂದು ನಾನು ನೋಡಿರಲಿಲ್ಲ. ನಾನು ಜಲಧೀರಪ್ಪ ರವರ ಸ್ನೇಹಿತನಾದ ಕಾರಣ ಅವರೊಂದಿಗೆ ಷರಿಕ್ಕಾಗಿ ನಿಡಿ 1 ಕರಾರು ಪತ್ರವನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಜಲಧೀರಪ್ಪ ಗುತ್ತಿಗೆ ಕರಾರು ಎಂದು ಒಂದನೇ ವಾದಿ ಮತ್ತು ಅವರ (ಮೂರನೇ ವಾದಿಯನ್ನು ಹೊರತುಪಡಿಸಿ) ಮಕ್ಕಳ ಸಹಿಯನ್ನು ಪಡೆದಿದ್ದಾನೆ ಎಂದರೆ ಸರಿಯಲ್ಲ. ನನಗೆ ಒಂದನೇ ವಾದಿಯ ಗಂಡ ಜಯಣ್ಣ ರವರ ಮನೆತನದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನನ್ನ ಸಮಕ್ಷಮ ಯಾವುದೇ ಕ್ರಯದ ಬಗ್ಗೆ ಮಾತುಕತೆ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಒಂದು ವಾರದ ಮೊದಲೇ ಮಾತುಕತೆಯಾಗಿತ್ತು ಎಂದು ನುಡಿದಿರುತ್ತಾರೆ. ಜಲಧೀರಪ್ಪ ರವರು ಹಣವನ್ನು ಕೊಡಲು ತಂದಿದ್ದರು. ಅವರು ನನ್ನ ಸಮಕ್ಷಮ ಯಾವುದೇ ಹಣವನ್ನು ನೀಡಿರಲಿಲ್ಲ. ನನಗೆ ಅವಸರ ಇದ್ದ ಕಾರಣ ನಾನು ಪತ್ರಕ್ಕೆ ರುಜು ಮಾಡಿ ಹೊರಟು ಹೋದೆನು.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಡಿ.ಸಿ. ವಕೀಲರಿಂದಃ**

ನನ್ನ ತಂದೆ ತಾಯಿಗೆ ನಾವು ಒಟ್ಟು 5 ಜನ ಮಕ್ಕಳು. ನನಗೆ ಒಬ್ಬ ಸಹೋದರ ಮತ್ತು 3 ಜನ ಸಹೋದರಿಯರು ಇದ್ದಾರೆ. ತೋರೆಬೀರನಹಳ್ಳಿ ಗ್ರಾಮದಲ್ಲಿ ಜಯಣ್ಣ ರವರ ದೊಡ್ಡಪ್ಪನ ಮಕ್ಕಳು ಇದ್ದಾರೆ ಎಂದರೆ ಸರಿ. ಸದರಿ ಜಯಣ್ಣ ರವರಿಗೆ ಅವರು ಹಿರಿಯೂರ್ ನ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಅವರಿಗೆ ಬಹಳ ಜನ ಸ್ನೇಹಿತರು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಲಕ್ಷಳ್ ಗ್ರಾಮದಲ್ಲಿ ಇದ್ದ ಜಮೀನು ನನ್ನ ತಾಯಿಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸದರಿ ಜಮೀನು ನನ್ನ ತಾಯಿಗೆ ಸೇರಿದ ಜಮೀನು ಮತ್ತು ಅವುಗಳನ್ನು ಅವರೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಜೊತೆಗೆ ಜಮೀನು ಮಾಡುತ್ತಿದ್ದೇವು ಎಂದು ನುಡಿದಿರುತ್ತಾರೆ. ನನ್ನ ಅಣ್ಣ ಹನುಮಂತರಾಯ 2013-14 ರಿಂದ ಪ್ರತ್ಯೇಕವಾಗಿ ವಾಸವಾಗಿದ್ದಾನೆ. ನಮ್ಮ ನಡುವೆ ಯಾವುದೇ ಪಾಲುವಿಭಾಗ ಆಗಿರುವುದಿಲ್ಲ. ಬಾಯಿ ಮಾತಿನಲ್ಲಿ ನಾವು ಭಾಗ ಮಾಡಿಕೊಂಡಿದ್ದೇವೆ. ನಾವು ಒಂದು ಎಕರೆಗೆ 30 ಸಾವಿರಗಳಂತೆ ಮಾತುಕತೆ ಮಾಡಿಕೊಂಡಿದ್ದೆವು. ಪತ್ರದಲ್ಲಿ 1 ಎಕರೆಗೆ 30 ಸಾವಿರ ರೂಪಾಯಿ ಎಂದು ನಮೂದು ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ಒಟ್ಟು ಮೊತ್ತ 4 ಲಕ್ಷ ಎಂದು ಪತ್ರದಲ್ಲಿ ಬರೆದಿದೆ ಎಂದು ನುಡಿದಿರುತ್ತಾರೆ. ಕ್ರಯ ಪತ್ರದಲ್ಲಿ ಪ್ರತಿ ಎಕರೆ ಬೆಲೆಯನ್ನು ನಮೂದು ಮಾಡಲಾಗುತ್ತದೆ ಎಂದರೆ ಸಾಕ್ಷಿ ಒಟ್ಟು ಮೊತ್ತವನ್ನು ನಮೂದು ಮಾಡಲಾಗಿದೆ ಎಂದು ನುಡಿದಿರುತ್ತಾರೆ. ಜಮೀನು ಗುತ್ತಿಗೆಗೆ ಕೊಟ್ಟಾಗ ಒಟ್ಟು ಮೊತ್ತವನ್ನು ನಮೂದು ಮಾಡುತ್ತಾರೆ ಎಂದರೆ ಸರಿ. ವ್ಯಾಜ್ಯ ಜಮೀನು ವಿವಿ ಸಾಗರದ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿಯಲ್ಲ. ವ್ಯಾಜ್ಯ ಜಮೀನುಗಳು ನದಿಯ ಅಕ್ಕಪಕ್ಕದಲ್ಲಿ ಇವೆ ಎಂದರೆ ಸಾಕ್ಷಿ 1 ಕಿಮೀ ದೂರದಲ್ಲಿವೆ ಎಂದು ನುಡಿದಿರುತ್ತಾರೆ. ನದಿಯ ಅಕ್ಕ ಪಕ್ಕದ ಜನರು ನದಿಯಲ್ಲಿ ಬೋರ್ ಹಾಕಿ ನೀರನ್ನು ಬಳಸುತ್ತಾರೆ ಎಂದರೆ ಸಾಕ್ಷಿ ವ್ಯಾಜ್ಯ ಜಮೀನಿನಲ್ಲಿ ಬೋರ್ ಅನ್ನು ಹಾಕಿರುವುದಿಲ್ಲವೆಂದು ನುಡಿದಿರುತ್ತಾರೆ. ಕ್ರಯದ ಬಗ್ಗೆ ಮಾತುಕತೆ ಆಗುವ ಕಾಲಕ್ಕೆ ವಾದಿಯ ಗ್ರಾಮದವರು ಯಾರು ಬಂದಿರಲಿಲ್ಲ. 1 ನೇ ವಾದಿಯ ತವರೂರು ಯರಬಳ್ಳಿ ಗ್ರಾಮ ಎಂದರೆ ಸರಿ. ಸದರಿ ಗ್ರಾಮದಿಂದ ಯಾರು ಬಂದಿರಲಿಲ್ಲ.

ಹಿರಿಯೂರ್ ನ ಸಕ್ಕರೆ ಕಾರ್ಖಾನೆಯಿಂದ ಜಯಣ್ಣ ರವರ ಸ್ನೇಹಿತರು ಯಾರು ಕೂಡ ಮಾತುಕತೆಗೆ ಬಂದಿರಲಿಲ್ಲ. ಜಮೀನಿನ ಮಾತುಕತೆ ಹಿರಿಯೂರ್ ನಲ್ಲಿ ಒಂದನೇ ವಾದಿಯ ಮನೆಯಲ್ಲಿ ಆಗಿರುತ್ತದೆ. ಮಾತುಕತೆ ಅವರ ಮನೆಯಲ್ಲಿಯೇ ಪತ್ರ ಬರವಣಿಗೆ ಮಾಡುವ 8–10 ದಿವಸಗಳ ಮೊದಲು ಮಾಡಲಾಗಿತ್ತು. ಸದರಿ ಮಾತುಕತೆಯಲ್ಲಿ ಸಾಕ್ಷಿದಾರರಾದ ಸದಾಶಿವಪ್ಪ ರವರು ಹಾಜರಿರಲಿಲ್ಲ. ಸಾಕ್ಷಿ ಮುಂದುವರೆದು ಪತ್ರ ಬರವಣಿಗೆ ಕಾಲಕ್ಕೆ ಮಾತ್ರ ಅವರು ಹಾಜರಿದ್ದರು ಎಂದು ನುಡಿದಿರುತ್ತಾರೆ.

ಪತ್ರವನ್ನು ಟೈಪ್ ಮಾಡಿದವರು ಯಾರು ಎಂದು ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು ಸ್ಟ್ಯಾಂಪ್ ವೆಂಡರ್ ರವರು ಬೇರೆಯವರ ಬಳಿ ಅದನ್ನು ಟೈಪ್ ಮಾಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಪತ್ರದಲ್ಲಿ ಯಾರು ಟೈಪ್ ಮಾಡಿದ್ದಾರೆ ಎನ್ನುವ ವಿಚಾರ ಬರೆದಿದೆ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಪತ್ರ ಬರವಣಿಗೆ ಮಾಡಿದಾಗ ಸಮಯ ಮಧ್ಯಾಹ್ನ 3.30 ಗಂಟೆಯಾಗಿತ್ತು. ತಾಲ್ಲೂಕು ಕಚೇರಿಯ ಪಶ್ಚಿಮ ದಿಕ್ಕಿಗೆ ಸ್ಟ್ಯಾಂಪ್ ವೆಂಡರ್ ರವರ ಕಚೇರಿ ಇದೆ. ತಾಲ್ಲೂಕು ಕಚೇರಿಯ ಪಶ್ಚಿಮ ದಿಕ್ಕಿಗೆ ರಸ್ತೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ಟ್ಯಾಂಪ್ ವೆಂಡರ್ ಗೆ ಸೇರಿದ ಕುರ್ಚಿ ಮತ್ತು ಟೇಬಲ್ ಇದೆ ಎಂದು ನುಡಿದಿರುತ್ತಾರೆ. ಕರಾರು ಪತ್ರವನ್ನು ನೋಂದಣಿ ಮಾಡಿಸಬಹುದಾಗಿತ್ತು  ಎಂದರೆ ಸಾಕ್ಷಿ ಅಲ್ಲಿ ಮಾಡಿಸಲು ಬರುವುದಿಲ್ಲವೆಂದು ನುಡಿದಿರುತ್ತಾರೆ. ನಿಜವಾಗಲೂ ಕರಾರು ಪತ್ರ ಆಗಿದ್ದರೆ ಅದನ್ನು ನಾನು ನೋಂದಣಿ ಮಾಡಿಸುತ್ತಿದ್ದೆ ಎಂದರೆ ಸರಿಯಲ್ಲ. ಚಳ್ಳಕೆರೆಗೆ ಬಂದು ನೋಂದಣಿ ಮಾಡಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ 1 ನೇ ವಾದಿ ಮತ್ತು  ಆಕೆಯ ಮಕ್ಕಳು ಚಳ್ಳಕೆರೆಗೆ ಬರುವ ಹಾಗೆ ಇರಲಿಲ್ಲವೆಂದು ನುಡಿದಿರುತ್ತಾರೆ. ಪತ್ರ ಬರವಣಿಗೆ ಮಾಡುವ ಕಾಲಕ್ಕೆ ಚಂದ್ರಪ್ಪ ಎನ್ನುವವರು ಇನ್ನೋರ್ವ ಸಾಕ್ಷಿದಾರರು ಇದ್ದರು. ಅವರು ತೋರೆಬೀರನಹಳ್ಳಿ ಗ್ರಾಮದವರು. ಅವರಿಗೆ ನಮ್ಮ ಕುಟುಂಬ ಮತ್ತು ಒಂದನೇ ವಾದಿಯ ಕುಟುಂಬದ ಪರಿಚಯವಿತ್ತು ಎಂದರೆ ಸರಿ. ತಾಲ್ಲೂಕು ಕಚೇರಿಯಲ್ಲಿ 2.30 ರಿಂದ 3.30 ಸಮಯದಲ್ಲಿ ಪತ್ರವನ್ನು ತಯಾರಿಸಲಾಯಿತು.

ಒಂದನೇ ವಾದಿಯ ಗಂಡ ಜಯಣ್ಣ ದಿನಾಂಕ 07.06.2006 ರಂದು ಮೃತಪಟ್ಟಿದ್ದಾರೆ ಎಂದರೆ ಸರಿ. 31.05.2006 ರಂದು ನಾನು ಒಂದನೇ  ವಾದಿಯ ತಂದೆ ರಂಗಸ್ವಾಮಿ ರವರಿಗೆ ಕರೆದುಕೊಂಡು ನಾನು ಒಂದನೇ ವಾದಿಯ ಗಂಡ ಜಯಣ್ಣ ರವರ ಮನೆಗೆ ಹೋಗಿದ್ದೆನು ಎಂದರೆ ಸರಿಯಲ್ಲ. ದಾವಾ ಜಮೀನನ್ನು 4 ಲಕ್ಷದ 68 ಸಾವಿರ ರೂಪಾಯಿಗಳಿಗೆ 8 ವರುಷಗಳ ಅವಧಿಗೆ ಪಡೆದುಕೊಳ್ಳಲಾಯಿತು ಎಂದರೆ ಸರಿಯಲ್ಲ. ನಾವು ಮುಂಗಡ 68 ಸಾವಿರ ರೂಪಾಯಿ ಹಣವನ್ನು ನೀಡಿದ್ದೆವು ಎಂದರೆ ಸಾಕ್ಷಿ ಗುತ್ತಿಗೆ ಕರಾರು ಆಗಿರುವುದಿಲ್ಲವೆಂದು ನುಡಿದಿರುತ್ತಾರೆ.

ನಾವು 4 ಲಕ್ಷ ರೂಪಾಯಿ ಹಣವನ್ನು ಕೊಡಲು ಕಾಲಾವಕಾಶ ಕೇಳಿದೆವು ಎಂದರೆ ಸರಿ. ಆದಾದ ಒಂದು ವಾರಗಳ ನಂತರ ಒಂದನೇ ವಾದಿಯ ಗಂಡ ಜಯಣ್ಣ ರವರು ಮರಣ ಹೊಂದಿದರು ಎಂದರೆ ನನಗೆ ಗೊತ್ತಿಲ್ಲ. ಆದಾದನಂತರ ಒಂದನೇ ವಾದಿ ನನಗೆ ಗುತ್ತಿಗೆ ಹಣವನ್ನು ಕೇಳಿದರು ಎಂದರೆ ಸಾಕ್ಷಿ ಅವರು ಕ್ರಯದ ಹಣವನ್ನು ಕೇಳಿದರು ಎಂದು ನುಡಿದಿರುತ್ತಾರೆ. ಒಂದನೇ ವಾದಿಗೆ ವ್ಯಾಜ್ಯ ಜಮೀನನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನು ಇಲ್ಲ ಎಂದರೆ ಸರಿ.

ಲಕ್ಷ ಹಳ್ಳಿ ಜಮೀನಿನ ಕ್ರಯಪತ್ರ ಮದ್ಯಾಹ್ನ 3.30 –4.00 ಗಂಟೆಗೆ ನೋಂದಣಿಯಾಯಿತು. ಸದರಿ ಜಮೀನು ಮಾರಾಟ ಮಾಡಿದ್ದು ಮತ್ತು ದಾವಾ ವ್ಯಾಜ್ಯದ ಜಮೀನಿನ ವ್ಯವಹಾರ ಒಂದೇ ದಿವಸ ನಡೆದಿರುತ್ತದೆ. ನಾನು ಒಂದನೇ ವಾದಿಗೆ 4 ಲಕ್ಷ ರೂಪಾಯಿ ಹಣವನ್ನು 01.11.2007 ರಲ್ಲಿ ಅವರ ಮನೆಯಲ್ಲಿ ಕೊಟ್ಟೆನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಹಣವನ್ನು ನಾನು ತಾಲ್ಲೂಕು ಕಚೇರಿಯಲ್ಲಿ ನೀಡಿದೆನು ಎಂದು ನುಡಿದಿರುತ್ತಾರೆ. ಸದರಿ ಹಣ ಬಾಕಿ ನಿಂತ ಗುತ್ತಿಗೆ ಹಣ ಎಂದರೆ ಸರಿಯಲ್ಲ. ನಾನು ತಾಲ್ಲೂಕು ಕಚೇರಿಗೆ ಹೋಗಿ ಕ್ರಯಪತ್ರವನ್ನು ಟೈಪ್ ಮಾಡಿಸಿಕೊಂಡು ಬಂದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲರ ಸಮಕ್ಷಮ ಟೈಪ್ ಮಾಡಿಸಲಾಗಿದೆ ಎಂದು ನುಡಿದಿರುತ್ತಾರೆ. ಒಂದು ಜೆರಾಕ್ಸ್ ಪ್ರತಿಯನ್ನು ನಾನು ಒಂದನೇ ವಾದಿಗೆ ನೀಡಿದೆನು ಎಂದರೆ ಸರಿಯಲ್ಲ. ಜೆರಾಕ್ಸ್ ಪ್ರತಿಯಲ್ಲಿ ಸಾಕ್ಷಿದಾರರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿ ಸದಾಶಿವಪ್ಪ ರವರು ನಾರಾಯಣಪುರ ಗ್ರಾಮದವರು ಎಂದರೆ ಸರಿ. ಅವರು ಹೈಸ್ಕೂಲ್ ನ ಶಿಕ್ಷಕರಾಗಿರುತ್ತಾರೆ. ಈಗ ಅವರು ನಿವೃತ್ತಿ ಹೊಂದಿರುತ್ತಾರೆ. ಅವರು ಕೊನೆಯದಾಗಿ ಹಿರಿಯೂರ್ ನ ಅಂಬೇಡ್ಕರ್ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಅವರನ್ನು ನಾನೇ ಕರೆದುಕೊಂಡು ಬಂದಿದ್ದೆನು. ಇನ್ನೋರ್ವ ಸಾಕ್ಷಿದಾರರಾದ ಚಂದ್ರಣ್ಣ ರವರನ್ನು ನಾನೇ ಕರೆದುಕೊಂಡು ಬಂದಿದ್ದೆನು. ಕರಾರು ಪತ್ರವನ್ನು ನಾನು ಸಾಕ್ಷಿದಾರರು ಸೇರಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಗಳು ಸದರಿ ಪತ್ರ ಮಾಡಿಕೊಳ್ಳಲು ತಾಲ್ಲೂಕು ಕಚೇರಿಗೆ ಬಂದಿರಲ್ಲಿ ಎಂದರೆ ಸರಿಯಲ್ಲ. ನನಗೆ ಈಗ ತೋರಿಸಿದ ನಿಡಿ 1 ರಲ್ಲಿರುವ ಸಹಿ ಮೂರನೇ ವಾದಿಗೆ ಸೇರಿಲ್ಲ ಎಂದರೆ ಸರಿಯಲ್ಲ. ಮನೋಹರ್ ರವರು ನ್ಯಾಯಾಲಯಕ್ಕೆ ಸಲ್ಲಿಸಿದದಾವಾ ಪತ್ರದಲ್ಲಿ ಕಂಡುಬರುವ ಮೂರನೇ ಸಹಿಯ ಪ್ರಕಾರ ತಮ್ಮ ಸಹಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮೂರನೇ ವಾದಿಯ ಸಹಿಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಹಿಯನ್ನು ಸೃಷ್ಟಿ ಮಾಡಿ ಈ ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ.

ವಾದಿಗಳು ನಾನು ಕಳುಹಿಸಿದ ನೋಟಿಸಿಗೆ ಉತ್ತರ ಕೊಡುವುದರ ಪೂರ್ವದಲ್ಲಿಯೇ ನಾನು ಅವರಿಗೆ ಭೇಟಿಯಾಗಿ ಜಮೀನನ್ನು ಬಿಟ್ಟು ಕೊಡುವುದಾಗಿ ಹೇಳಿದೆನು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಅವರು ನನ್ನ ನೋಟಿಸಿಗೆ ಉತ್ತರ ನೀಡಲಿಲ್ಲ ಎಂದರೆ ಸರಿಯಲ್ಲ. ವಾದಿ ಬಂದು ಕೇಳಿದಾಗ ನಾನು ಜಮೀನಿನ ಸ್ವಾದೀನವನ್ನು ಬಿಟ್ಟುಕೊಡುವುದಿಲ್ಲವೆಂದು ಹೇಳಿದೆನು ಎಂದರೆ ಸರಿಯಲ್ಲ. 2014 ರಲ್ಲಿಯೇ ಜಮೀನು ಗುತ್ತಿಗೆ ಮುಗಿದಿದೆ ಎಂದು ಅವರು ನನಗೆ ಹೇಳಿದ್ದರು ಎಂದರೆ ಸರಿಯಲ್ಲ. ನಾನು ಜಮೀನಿನಲ್ಲಿ ಬಾಳೆ ಬೆಳೆ ಇದೆ ತದನಂತರ ಜಮೀನನ್ನು ಬಿಟ್ಟು ಕೊಡುವುದಾಗಿ ಹೇಳಿದ್ದೆನು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ